ಕಛೇರಿ : +91 80 2287 4039
+91 80 2235 4085
ಫ್ಯಾಕ್ಸ್ : +9180 2228 5591
ಇ-ಮೇಲ್ : com-hfws@karnataka.gov.in

# ಆಯುಕ್ತಾಲಯ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಸಂಖ್ಯೆ:ಡಿಡಿ/ಎಸ್‌ಎಸ್‌ಯು/ಕೋವಿಡ್-19/ಮಾ&ಪ್ರ.ಕಾ/42/2020-21

ದಿನಾಂಕ: 13/08/2020

**ಪ್ರಮಾಣಿತ ಕಾರ್ಯಚರಣಾ ವಿಧಾನ(ಎಸ್.ಓ.ಪಿ)**

**(Standard Opeating Procedure)**

ಕರ್ನಾಟಕ ಲೋಕ ಸೇವಾ ಆಯೋಗದಿಂದ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿನ ಸಮೂಹ-ಎ ವೃಂದದ ಸಹಾಯಕ ನಿಯಂತ್ರಕರ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ದಿನಾಂಕ:17-08-2020 ರಂದು ಹಾಗೂ ದಿನಾಂಕ:24-08-2020 ರಂದು ಗೆಜೆಟೆಡ್ ಪ್ರೊಬೇಷನರ್ ಗ್ರೂಪ್ ಎ ಮತ್ತು ಬಿ ವೃಂದದ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಿಗಧಿಪಡಿಸಲಾಗಿದ್ದು, ಪ್ರಸ್ತುತ ಕೋವಿಡ್-19 ಹಿನ್ನೆಲೆಯಲ್ಲಿ ಪರೀಕ್ಷೆಯನ್ನು ಕಟ್ಟುನಿಟ್ಟಾಗಿ ಹಾಗೂ ಸುಗಮವಾಗಿ ನಡೆಸಲು ವಿವರವಾದ ಪ್ರಮಾಣಿತ ಕಾರ್ಯಚರಣಾ ವಿಧಾನ(ಎಸ್.ಓ.ಪಿ) ಯನ್ನು ಸಿದ್ಧಪಡಿಸಿದೆ. ಇಲಾಖೆಯ ಎಲ್ಲಾ ಹಂತದ ಅಧಿಕಾರಿಗಳು, ಜಿಲ್ಲಾಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲು ಆದೇಶಿಸಿದೆ.

**A) ಪರೀಕ್ಷಾ ಉಪಕೇಂದ್ರ / ಆವರಣವನ್ನು ಸ್ಯಾನಿಟೈಜ್ ಮಾಡುವ ಬಗ್ಗೆ.**

1. ಪ್ರತಿ ಪರೀಕ್ಷಾ ಕೇಂದ್ರವನ್ನು ಪರೀಕ್ಷೆಗೆ ಮೂರು ದಿನಗಳ ಮೊದಲು ಸೋಂಕು ನಿವಾರಕ ದ್ರಾವಣವನ್ನು ಸಂಬಂಧಪಟ್ಟ ನಗರ/ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಮೂಲಕ ಸಿಂಪಡಿಸಿ ಸ್ವಚ್ಛಗೊಳಿಸುವುದು.
   - ಮುಖ್ಯ ದ್ವಾರ/ಗೇಟ್
   - ಪರೀಕ್ಷಾ ಕೊಠಡಿಗಳು, ಟೇಬಲ್ಸ್, ಚೇರ್, ಮುಂತಾದವುಗಳು
   - ಶೌಚಾಲಯಗಳು(ಪುರುಷ ಮತ್ತು ಮಹಿಳೆ) ಕೈ-ಮುಖ ತೊಳೆದುಕೊಳ್ಳಲು ಇಟ್ಟಿರುವ ಬೋಗುಣಿ(WASH BASIN)
   - ಯಂತ್ರೋಪಕರಣಗಳು ಮತ್ತು ಲಿಫ್ಟ್‌ಗಳು ಇದ್ದಲ್ಲಿ.
2. ಪರೀಕ್ಷಾ ಕೇಂದ್ರಗಳಲ್ಲಿನ ಶೌಚಾಲಯಗಳನ್ನು ಸೋಂಕು ನಿವಾರಕ ದ್ರಾವಣದಿಂದ ಸಿಂಪಡಿಸಿ ಸ್ವಚ್ಛಗೊಳಿಸುವುದು ಹಾಗೂ ಲಿಕ್ವಿಡ್ ಸೋಪು ಲಭ್ಯವಿರುವಂತೆ ಖಚಿತಪಡಿಸಿಕೊಳ್ಳುವುದು.
3. ಪ್ರತಿ ಪರೀಕ್ಷೆಯ ನಂತರ ಪರೀಕ್ಷಾ ಕೇಂದ್ರದ ಎಲ್ಲಾ ಕೊಠಡಿಗಳು/ಪೀಠೋಪಕರಣಗಳನ್ನು ಸ್ಯಾನಿಟೈಸ್ (1% ಸೋಡಿಯಂ ಹೈಪೋಕ್ಲೋರೈಡ್ ದ್ರಾವಣದೊಂದಿಗೆ) ಮಾಡುವುದು.

**B) ಅಭ್ಯರ್ಥಿಗಳು ಪರೀಕ್ಷಾ ಕೇಂದ್ರವನ್ನು ಪ್ರವೇಶಿಸುವ ಸಮಯದಲ್ಲಿ ಕೈಗೊಳ್ಳಬೇಕಾದ ಕ್ರಮಗಳು.**

1) ಪರೀಕ್ಷಾ ಮುಖ್ಯದ್ವಾರದಲ್ಲಿ ಅಭ್ಯರ್ಥಿಗಳಿಗೆ ಹ್ಯಾಂಡ್ ಸ್ಯಾನಿಟೈಸ್ ಮಾಡಿಸುವ ವ್ಯವಸ್ಥೆ ಮಾಡಬೇಕು ಮತ್ತು ಥರ್ಮಲ್ ಸ್ಕ್ರೀನಿಂಗ್ ಮಾಡಿಸಿ ಒಳಬಿಡುವ ವ್ಯವಸ್ಥೆಯನ್ನು ಮಾಡಬೇಕು.
2) ಅಭ್ಯರ್ಥಿಗಳಿಗೆ ಪ್ರವೇಶ ಪತ್ರದಲ್ಲಿನ ಸೂಚನೆಗಳಲ್ಲಿ ಪರೀಕ್ಷಾ ಕೇಂದ್ರಕ್ಕೆ ನಿಗದಿತ ಸಮಯಕ್ಕೆ ಹಾಜರಾಗುವಂತೆ ಸೂಚಿಸಲಾಗಿದೆ. ಅದರಂತೆ ಪರೀಕ್ಷಾರ್ಥಿಗಳು 2 ಗಂಟೆ ಮೊದಲೇ ಹಾಜರಿರಬೇಕು.



3ನೇ ಮಹಡಿ, ಐಪಿಪಿ ಕಟ್ಟಡ, ಆನಂದ್ ರಾವ್ ವೃತ್ತ, ಬೆಂಗಳೂರು - 560 009.

ತೆರೆದಿಡಬೇಕು.

3) ಪರೀಕ್ಷೆ ಪ್ರಾರಂಭವಾಗುವ ಎರಡು ಗಂಟೆ ಮುಂಚೆ ಮುಖ್ಯ ದ್ವಾರವನ್ನು ತೆರೆದಿಡಬೇಕು.
4) ಪರೀಕ್ಷಾ ಕೇಂದ್ರದ ಒಳ ಆವರಣಕ್ಕೆ ಪ್ರವೇಶಿಸಿದ ಕೂಡಲೆ ಅಭ್ಯರ್ಥಿಗಳು ತಮ್ಮ ತಮ್ಮ ಪರೀಕ್ಷಾ ಕೊಠಡಿ/ಹಾಲ್‌ಗಳಿಗೆ ತೆರಳಿ ಅವರುಗಳಿಗೆ ನಿಗದಿಪಡಿಸಿದ ಆಸನದಲ್ಲಿ ಕುಳಿತುಕೊಳ್ಳಬೇಕು. ಅದನ್ನು ಬಿಟ್ಟು ಪಡಸಾಲೆಯಲ್ಲಿ ಅನವಶ್ಯಕವಾಗಿ ಓಡಾಡಬಾರದು. ಅಲ್ಲದೇ ಪರೀಕ್ಷಾ ಕೇಂದ್ರದ ಆವರಣದಲ್ಲಿ ಅಭ್ಯರ್ಥಿಗಳು ಗುಂಪು ಸೇರಬಾರದು.
5) ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಆಗಮಿಸುವಾಗ ಹಾಗೂ ಅವರಿಗೆ ಹಂಚಿಕೆಯಾಗಿರುವ ಕೊಠಡಿಗೆ ತೆರಳುತ್ತಿರುವಾಗ ದೈಹಿಕ ಅಂತರ ಕಾಯ್ದುಕೊಳ್ಳುತ್ತಿರುವ ಬಗ್ಗೆ ಆರಕ್ಷಕರು/ಪರೀಕ್ಷಾ ಸಿಬ್ಬಂದಿಗಳು ವೀಕ್ಷಣೆಯ ಮೂಲಕ ಖಚಿತಪಡಿಸಿಕೊಳ್ಳುವುದು.
6) ಪರೀಕ್ಷೆ ಕೊಠಡಿಗೆ ನಿಯೋಜಿಸಲಾಗಿರುವ ಸಂವೀಕ್ಷಕರು ಪರೀಕ್ಷೆ ಪ್ರಾರಂಭವಾಗುವ ಮುಂಚೆ ಅವರಿಗೆ ಹಂಚಿಕೆ ಮಾಡಿರುವ ಕೊಠಡಿಗೆ ತೆರಳಿ ಅಭ್ಯರ್ಥಿಗಳಿಗೆ ಹಂಚಿಕೆ ಮಾಡಿರುವ ಆಸನಗಳಲ್ಲಿ ಕುಳಿತಿರುವುದನ್ನು ಗಮನಿಸಬೇಕು. ಹಾಗೂ ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯಲ್ಲಿ ಅಡ್ಡಾಡದಂತೆ ನೋಡಿಕೊಳ್ಳಬೇಕು.
7) ಪರೀಕ್ಷೆಗಳನ್ನು ಪ್ರಾರಂಭಿಸುವ ನಿಗದಿತ ಸಮಯಕ್ಕೆ ಹತ್ತು ನಿಮಿಷಗಳ ಮುನ್ನ ಪರೀಕ್ಷಾ ಕೇಂದ್ರಗಳ ಮುಖ್ಯದ್ವಾರಗಳನ್ನು ಮುಚ್ಚಬೇಕು.
8) ಅಭ್ಯರ್ಥಿಗಳು ಗುಂಪಾಗುವುದನ್ನು ತಪ್ಪಿಸುವ ಉದ್ದೇಶದಿಂದಾಗಿ ಅಭ್ಯರ್ಥಿಗಳ ಆಸನ ವ್ಯವಸ್ತೆಯ (SEATING PLAN) ಪಟ್ಟಿಗಳನ್ನು ಅಭ್ಯರ್ಥಿಗಳಿಗೆ ಕಾಣಿಸುವಂತೆ ಆವರಣದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಅಂದರೆ **5 ಕ್ಕಿಂತ ಕಡಿಮೆ ಇಲ್ಲದಂತೆ ಪ್ರದರ್ಶಿಸಬೇಕು.** ಮತ್ತು ಆವರಣದಲ್ಲಿ ಮೇಲ್ವಿಚಾರಕರು ಆಸನ ವ್ಯವಸ್ಥೆಯ ಕುರಿತು ಘೋಷಣೆ ಮಾಡಬೇಕು.
9) ಪರೀಕ್ಷೆಗಳು ನಡೆಯುವ ಸಂದರ್ಭದಲ್ಲಿ ಪರೀಕ್ಷಾ ಕೇಂದ್ರದ ಒಳಗೆ ಹಾಗೂ ಹೊರಗೆ ದೈಹಿಕ ಅಂತರವನ್ನು ಪಾಲಿಸುತ್ತಿರುವ ಬಗ್ಗೆ ಖಾತರಿಪಡಿಸಿಕೊಳ್ಳಬೇಕು.
10) ಅಭ್ಯರ್ಥಿಗಳನ್ನು ಪರೀಕ್ಷಾ ಕೇಂದ್ರಗಳಿಗೆ ಬಿಡಲು ಬರುವ ಪೋಷಕರು ಯಾವುದೇ ಕಾರಣಕ್ಕೂ ಗುಂಪುಗೂಡಲು ಅವಕಾಶವನ್ನು ನೀಡದಿರುವುದು.
11) ಮಧ್ಯಾಹ್ನದ ಊಟದ ಸಮಯದಲ್ಲಿ ಅಭ್ಯರ್ಥಿಗಳು ಹಾಗೂ ಪೋಷಕರು ಪರೀಕ್ಷಾ ಕೇಂದ್ರದ ಆವರಣದಲ್ಲಿ ಗುಂಪುಗೂಡದಂತೆ ಕ್ರಮವಹಿಸುವುದು.

**C) ಆಸನ ವ್ಯವಸ್ಥೆಯ ಬಗ್ಗೆ.**

1) ಆಯೋಗದಲ್ಲಿ ಚಾಲ್ತಿಯಲ್ಲಿರುವ ಪರೀಕ್ಷಾ ಸೂಚನೆಗಳನ್ವಯ ಪರೀಕ್ಷಾ ಕೊಠಡಿಯಲ್ಲಿನ ಆಸನ ವ್ಯವಸ್ಥೆಯು ಕೇಂದ್ರ ಸರ್ಕಾರದ ದೈಹಿಕ ಅಂತರದ ಮಾನದಂಡದನ್ವಯ ಪ್ರತಿಯೊಬ್ಬ ಅಭ್ಯರ್ಥಿಗೆ ಅಂದಾಜು 2 metres (6 feet) ಅಂತರವನ್ನು ಕಾಯ್ದುಕೊಳ್ಳುವ ಪದ್ಧತಿಯಂತೆ ಆಸನ ವ್ಯವಸ್ಥೆಯನ್ನು ನಿರ್ವಹಿಸಬೇಕು. ಪರೀಕ್ಷಾ ಕೇಂದ್ರದ ಮೇಲ್ವಿಚಾರಕರು ಕೇಂದ್ರ ಸರ್ಕಾರದ ದೈಹಿಕ ಮಾನದಂಡಗಳನ್ವಯ ಅಭ್ಯರ್ಥಿಗೆ 2 metres (6 feet) ದೈಹಿಕ ಅಂತರವನ್ನು ಕಾಯ್ದುಕೊಂಡಿರುವ ಬಗ್ಗೆ ಜಾಗರೂಕತೆಯಿಂದ ಪರಿಶೀಲಿಸಿ ಖಚಿತಪಡಿಸಿಕೊಳ್ಳಬೇಕು.
2) ಪ್ರತಿ ಕೊಠಡಿಯಲ್ಲಿ ದೈಹಿಕ ಅಂತರ ಕನಿಷ್ಠ 3 ಅಡಿಗಳ ಕಾಪಾಡಿಕೊಳ್ಳಬೇಕು. ಪ್ರತಿ ಕೊಠಡಿಯಲ್ಲಿ ಗರಿಷ್ಠ 24 ಅಭ್ಯರ್ಥಿಗಳಿರಬೇಕು. ಒಂದು ಬೆಂಚಿನಲ್ಲಿ ಇಬ್ಬರು ಅಭ್ಯರ್ಥಿಗಳು ಮಾತ್ರ, ಒಂದು ಸಾಲಿನಲ್ಲಿ 6 ಬೆಂಚುಗಳಂತೆ 2 ಸಾಲುಗಳಲ್ಲಿ ಒಟ್ಟು 12 ಬೆಂಚುಗಳನ್ನು ಅಳವಡಿಸುವುದು.
3) ಪ್ರತಿ ಡೆಸ್ಕ್‌ಗಳ ನಡುವೆ ಕನಿಷ್ಠ 3 ಅಡಿಗಳ ಅಂತರ ಇರಬೇಕು.
4) ವಿಶೇಷ ಕೊಠಡಿಯಲ್ಲಿ ಪ್ರತಿ ಡೆಸ್ಕ್‌ಗೆ ಒಬ್ಬ ಅಭ್ಯರ್ಥಿ ಇರಬೇಕು ಹಾಗೂ ಪ್ರತಿ ಡೆಸ್ಕ್‌ಗಳ ನಡುವೆ ಕನಿಷ್ಠ ಆರು ಅಡಿ ಅಂತರ ಇರಬೇಕು.

**D) ಹ್ಯಾಂಡ್ ಸ್ಯಾನಿಟೈಸರ್, ಮುಖ ಗವಸು ಮತ್ತು ಕೈಕವಚಗಳ(ಗ್ಲೌಸ್) ವ್ಯವಸ್ಥೆ ಬಗ್ಗೆ.**

1) ಅಭ್ಯರ್ಥಿಗಳು ಹಾಗೂ ಪರೀಕ್ಷೆಗಳಿಗೆ ನಿಯೋಜಿತರಾಗುವ ಎಲ್ಲಾ ಅಧಿಕಾರಿ/ಸಿಬ್ಬಂದಿ ವರ್ಗದವರು ಮುಖಗವಸು (ಮಾಸ್ಕ್) ಧರಿಸುವುದು ಕಡ್ಡಾಯವಾಗಿರುತ್ತದೆ.
2) ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದೊಳಗೆ ಪ್ರವೇಶಿಸುವ ಸಮಯದಲ್ಲಿ ಅವರ ಗುರುತನ್ನು ಪರಿಶೀಲಿಸುವ ಸಲುವಾಗಿ ಹಾಗೂ ಪರೀಕ್ಷಾ ಕೊಠಡಿಯಲ್ಲಿ ಸಂವೀಕ್ಷಕರು ನಾಮಿನಲ್ ರೋಲ್ ಕಮ್ ಅಟೆಂಡೆನ್ಸ್ ಶೀಟ್‌ನಲ್ಲಿ ಅಭ್ಯರ್ಥಿಗಳ ವಿವರಗಳನ್ನು ಪರಿಶೀಲಿಸುವ ಸಮಯದಲ್ಲಿ ಮುಖಗವಸು (ಮಾಸ್ಕ್)ತೆಗೆಯುವುದು ಅವಶ್ಯಕವಾಗಿರುತ್ತದೆ. ಇದಲ್ಲದೇ ಪರೀಕ್ಷಾ ಕಾರ್ಯಗಳಿಗೆ ನಿಯೋಜಿತ ಅಧಿಕಾರಿ/ಸಿಬ್ಬಂದಿಗಳು ಅಭ್ಯರ್ಥಿಗಳನ್ನು ಗುರುತಿಸುವ ಸಲುವಾಗಿ ಮುಖ ಪರಿಶೀಲನೆಗೆ ಕೇಳಿದಾಗ ಮುಖಗವಸು ತೆಗೆಯಬೇಕಾಗುತ್ತದೆ.
3) ಪರೀಕ್ಷಾ ಕೇಂದ್ರದ ಮೇಲ್ವಿಚಾರಕರು ಪ್ರತಿ ಪರೀಕ್ಷಾ ಕೊಠಡಿಗಳಲ್ಲಿ ಉತ್ತಮ ಗುಣಮಟ್ಟದ ಕೈ ಸ್ಯಾನಿಟೈಸರ್, ಮುಖಗವಸು (3Ply mask) ಮತ್ತು ಕೈಗವಸುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಪ್ರತಿ ಪರೀಕ್ಷಾ ಕೊಠಡಿಗಳಲ್ಲಿ ಉಪಯೋಗಕ್ಕೆ ಒದಗಿಸತಕ್ಕದ್ದು.
4) ಅಭ್ಯರ್ಥಿಗಳು ಎರಡೂ ಅಧಿವೇಶನಗಳ ಪರೀಕ್ಷೆಗಳಿಗೆ ಪರೀಕ್ಷಾ ಕೇಂದ್ರದ ಮುಖ್ಯ ದ್ವಾರದೊಳಗೆ ಪ್ರವೇಶಿಸುವಾಗ ಅವರ ಕೈಗಳನ್ನು ಸ್ಯಾನಿಟೈಸ್ ಮಾಡಿಕೊಳ್ಳಲು ಸಾಕಾಗುವಷ್ಟು ಪ್ರಮಾಣದ ಸ್ಯಾನಿಟೈಸರ್‌ಗಳನ್ನಿಟ್ಟಿರುವುದನ್ನು ಪರೀಕ್ಷಾ ಮೇಲ್ವಿಚಾರಕರು ಖಚಿತಪಡಿಸಕೊಳ್ಳತಕ್ಕದ್ದು. ಈ ಸಂಬಂದ ಸಿಬ್ಬಂದಿಯನ್ನು ನಿಯೋಜಿಸಬೇಕು.
5) ಪರೀಕ್ಷಾ ಕೇಂದ್ರಕ್ಕೆ ಹಾಜರಾಗಿರುವ ಅಭ್ಯರ್ಥಿಗಳಿಗೆ ಹಂಚಿಕೆ ಮಾಡುವ ಸಲುವಾಗಿ, ಅಭ್ಯರ್ಥಿಗಳ ಸಂಖ್ಯೆಯಷ್ಟೇ ಮುಖಗವಸುಗಳನ್ನು ಸಿದ್ಧಮಾಡಿಟ್ಟುಕೊಂಡಿರುವುದನ್ನು ಪರೀಕ್ಷಾ ಮೇಲ್ವಿಚಾರಕರು ಖಚಿತಪಡಿಸಕೊಳ್ಳತಕ್ಕದ್ದು.
6) ಸ್ಯಾನಿಟೈಸರ್‌ಗೆ ಮತ್ತು ಮುಖಗವಸು ಹೂಡಿಕೆಗಳಾಗಿ ಖರ್ಚು ಮಾಡಿರುವ ಹಣವನ್ನು ಖರೀದಿಸಿರುವ ರಸೀದಿಗಳೊಂದಿಗೆ ಸಲ್ಲಿಸಿದಲ್ಲಿ ಅವುಗಳನ್ನು ಮರುಪಾವತಿಸಲಾಗುವುದು. ಆದರೂ ಅವಶ್ಯವಿರುವ ಮೊತ್ತವನ್ನು ಸಾದಿಲ್ವಾರು ಮುಂಗಡದೊಂದಿಗೆ ಈಗಾಗಲೇ ಪರೀಕ್ಷಾ ಕೇಂದ್ರಗಳ ಮೇಲ್ವಿಚಾರಕರುಗಳಿಗೆ ಬಿಡುಗಡೆ ಮಾಡಿರುವ ಹಣದಲ್ಲಿ ಸೇರಿಸಲಾಗಿದೆ.

**E) ಸಿಬ್ಬಂದಿಗಳ ಪ್ರಮಾಣಿತ ಕಾರ್ಯಾಚರಣಾ ವಿಧಾನ:**

1) ಪರೀಕ್ಷಾ ಕೇಂದ್ರದ ಮುಖ್ಯ ಮೇಲ್ವಿಚಾರಕರು ಯಾವುದೇ ಸಿಬ್ಬಂದಿಗೆ ರೋಗ ಲಕ್ಷಣಗಳಿಲ್ಲದಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು.
2) ಪರೀಕ್ಷಾ ಕೇಂದ್ರಕ್ಕೆ ನಿಯೋಜಿಸಲಾದ ಎಲ್ಲಾ ಸಿಬ್ಬಂದಿಗಳು ತಮ್ಮ ಕೈಗಳನ್ನು ಸ್ಯಾನಿಟೈಸ್‌ಗೊಳಿಸಬೇಕು.
3) ಶೌಚಾಲಯಗಳಲ್ಲಿ ಕೈ ತೊಳೆಯಲು ನೀರು, ಸಾಬೂನು ಲಭ್ಯವಿರುವಂತೆ ಉಪ ಮುಖ್ಯ ಮೇಲ್ವಿಚಾರಕರು ನೋಡಿಕೊಳ್ಳಬೇಕು (ಅನುಬಂಧ–1)
4) ಕೊಠಡಿ ಮೇಲ್ವಿಚಾರಕರು ತಮ್ಮ ಮೇಜಿನ ಮೇಲೆ ಸ್ಯಾನಿಟೈಸರ್ ಇಟ್ಟಿರಬೇಕು. ಪ್ರಶ್ನೆ ಪತ್ರಿಕೆಗಳನ್ನು ಮತ್ತು ಉತ್ತರ ಪತ್ರಿಕೆಗಳನ್ನು ವಿತರಿಸುವ ಮೊದಲು ಕೈಗಳನ್ನು ಸ್ಯಾನಿಟೈಸ್‌ಗೊಳಿಸಬೇಕು.
5) ಸಾಮಾನ್ಯ ಪರೀಕ್ಷಾ ಕೇಂದ್ರಗಳಲ್ಲಿ ಕಂಟೈನ್‌ಮೆಂಟ್ ವಲಯದಿಂದ ಬಂದಿರುವ ಅಭ್ಯರ್ಥಿಗಳಿಗೆ ವಿಶೇಷ ಕೊಠಡಿಯಲ್ಲಿ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡುವುದು.

6) ಸಂವೀಕ್ಷಕರು ತಮ್ಮ ಪರೀಕ್ಷಾ ಕೊಠಡಿಯಲ್ಲಿನ ಅಭ್ಯರ್ಥಿಗಳಲ್ಲಿ ಕೆಮ್ಮು, ನೆಗಡಿ, ಶೀತ, ಜ್ವರ ಹಾಗೂ ಉಸಿರಾಟದ ತೊಂದರೆಯಂತಹ ರೋಗ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣವೇ ಸದರಿ ಮಾಹಿತಿಯನ್ನು ಮೇಲ್ವಿಚಾರಕರ ಗಮನಕ್ಕೆ ತರಬೇಕು. ಮೇಲ್ವಿಚಾರಕರು ಅಂತಹ ಅಭ್ಯರ್ಥಿಗಳಿಗೆ ಪ್ರತ್ಯೇಕ ಕೊಠಡಿಯಲ್ಲಿ ಆಸನದ ವ್ಯವಸ್ಥೆಯನ್ನು ಕೈಗೊಳ್ಳುವುದು. ಇದಕ್ಕನುಗುಣವಾಗಿ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಎರಡು ಹೆಚ್ಚುವರಿ ಕೊಠಡಿಗಳನ್ನು ಕಾಯ್ದಿರಿಸುವುದು. ಹೆಚ್ಚುವರಿ ಕೊಠಡಿಗಳನ್ನು ಉಪಯೋಗಿಸಿದಲ್ಲಿ ಸದರಿ ಕೊಠಡಿಗಳಿಗೆ ಹೆಚ್ಚುವರಿ ಸಂವೀಕ್ಷಕರನ್ನು ಪರೀಕ್ಷಾ ಮೇಲ್ವಿಚಾರಕರು ನೇಮಿಸತಕ್ಕದ್ದು.

7) ಪರೀಕ್ಷಾ ಕೇಂದ್ರದ ಮೇಲ್ವಿಚಾರಕರು ಅಭ್ಯರ್ಥಿಗಳನ್ನು ಕೊಠಡಿಯ ಬದಲಾವಣೆ ಮಾಡಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮಗಳ ವಿವರಗಳನ್ನು ನಮೂನೆ–ಹೆಚ್ ರಲ್ಲಿ ನಮೂದಿಸಿ, ವರದಿಯನ್ನು ಕಡ್ಡಾಯವಾಗಿ ಆಯೋಗಕ್ಕೆ ರವಾನಿಸತಕ್ಕದ್ದು. ಅದಲ್ಲದೆ ಈ ಬಗ್ಗೆ ಆಯೋಗದ ಕಂಟ್ರೋಲ್ ರೂಂಗೆ ಪರೀಕ್ಷಾ ದಿನದಂದೇ ಮಾಹಿತಿಯನ್ನು ನೀಡುವುದು.

8) ಪ್ರತಿಯೊಬ್ಬ ಅಭ್ಯರ್ಥಿಯು ಮಾಸ್ಕ್‌ಧರಿಸಿಯೇ ಪರೀಕ್ಷಾ ಕೇಂದ್ರಕ್ಕೆ ಹಾಜರಾಗಿ ಪರೀಕ್ಷೆ ಬರೆಯಬೇಕು.

9) ವಿಶೇಷ ಪರೀಕ್ಷಾ ಕೊಠಡಿಯನ್ನು, ಪರೀಕ್ಷೆ ಮುಗಿದ ನಂತರ ಪ್ರತಿ ದಿನ ಸೋಂಕು ನಿವಾರಕ ದ್ರಾವಣಗಳಿಂದ ಸ್ವಚ್ಛಗೊಳಿಸಲು ಕ್ರಮ ವಹಿಸುವುದು.

10) ಸಂವೀಕ್ಷಕರು ಮತ್ತು ಮೇಲ್ವಿಚಾರಕರಿಗೆ ಕೈಗವಸು ಮತ್ತು ವೈದ್ಯಕೀಯ ಮಾಸ್ಕ್‌ಗಳನ್ನು ಒದಗಿಸಬೇಕು.

## F) ಆರೋಗ್ಯ ತಪಾಸಣಾ ಕೌಂಟರ್:

1) ಪರೀಕ್ಷಾ ಕೇಂದ್ರಗಳಲ್ಲಿ 200 ಅಭ್ಯರ್ಥಿಗಳಿಗೆ ಒಂದರಂತೆ ಆರೋಗ್ಯ ತಪಾಸಣಾ ಕೇಂದ್ರವನ್ನು ಮುಖ್ಯದ್ವಾರದಲ್ಲಿ ಸ್ಥಾಪಿಸುವುದು.

2) ಪ್ರತಿ ಪರೀಕ್ಷಾ ಕೇಂದ್ರಕ್ಕೆ ಆರೋಗ್ಯ ಇಲಾಖೆಯಿಂದ ಇಬ್ಬರು ಅರೆ ವೈದ್ಯಕೀಯ ಸಿಬ್ಬಂದಿ ಪಡೆಯುವುದು. ಸದರಿ ಸಿಬ್ಬಂದಿಯು ಪರೀಕ್ಷಾ ಕೇಂದ್ರಕ್ಕೆ ಥರ್ಮಲ್ ಸ್ಕ್ಯಾನರ್ ಹಾಗೂ ಪ್ರಥಮ ಚಿಕಿತ್ಸೆ ಪೆಟ್ಟಿಗೆಯೊಂದಿಗೆ ಹಾಜರಿರಲು ಜಿಲ್ಲಾಧಿಕಾರಿಗಳ ಮೂಲಕ ಸೂಚಿಸುವುದು.

3) ಆರೋಗ್ಯ ತಪಾಸಣಾ ಕೌಂಟರ್‌ಗಳು ಪರೀಕ್ಷೆ ದಿನಗಳಂದು ಬೆಳಿಗ್ಗೆ 8 ರಿಂದ ಪರೀಕ್ಷೆ ನಡೆಯುವ ಅವಧಿಯವರೆಗೂ ಕಾರ್ಯ ನಿರ್ವಹಿಸಬೇಕು.

4) ಪರೀಕ್ಷಾ ಕಾರ್ಯದಲ್ಲಿ ತೊಡಗುವ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಕಡ್ಡಾಯವಾಗಿ ತಪಾಸಣೆಗೆ ಒಳಪಡಿಸಿ, ಸ್ಯಾನಿಟೈಸ್ ಮಾಡಿ ಮಾಸ್ಕ್ ಧರಿಸಿರುವ ಬಗ್ಗೆ ಖಾತರಿಪಡಿಸಿಕೊಂಡು ನಂತರ ಪರೀಕ್ಷಾ ಕೇಂದ್ರಗಳಿಗೆ ಪ್ರವೇಶಿಸಲು ಅನುಮತಿಸಬೇಕು.

5) ಜಿಲ್ಲಾ ಮತ್ತು ತಾಲ್ಲೂಕು ಆರೋಗ್ಯ ಕೇಂದ್ರದಲ್ಲಿ ಸಂಪರ್ಕಿಸಿ ತುರ್ತು ಕಾರ್ಯಕ್ಕಾಗಿ ಒಂದು ಅಂಬ್ಯುಲೆನ್ಸ್ ಸಿದ್ಧವಾಗಿರುವಂತೆ ನೋಡಿಕೊಳ್ಳುವುದು.

## G) ಕಂಟೈನ್‌ಮೆಂಟ್ ವಲಯಗಳಿಂದ ಹಾಜರಾಗುವ ಅಭ್ಯರ್ಥಿಗಳಿಗೆ:

1) ಕಂಟೈನ್‌ಮೆಂಟ್ ವಲಯದಿಂದ ಬಂದಿರುವ ಅಭ್ಯರ್ಥಿಗಳಿಗೆ "ವಿಶೇಷ ಕೊಠಡಿ"ಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸುವುದು.

2) ಇಂತಹ ಅಭ್ಯರ್ಥಿಗಳಿಗೆ ವೈದ್ಯಕೀಯ ಮಾಸ್ಕ್‌ಗಳನ್ನು ನೀಡುವುದು.

3) ಸಂವೀಕ್ಷಕರು ಮತ್ತು ಮೇಲ್ವಿಚಾರಕರಿಗೆ ಕೈಗವಸು ಮತ್ತು ವೈದ್ಯಕೀಯ ಮಾಸ್ಕ್‌ಗಳನ್ನು ಒದಗಿಸುವುದು.

4) ಎಲ್ಲಾ ವಿಶೇಷ ಕೊಠಡಿಗಳನ್ನು ಆ ದಿನದ ಪರೀಕ್ಷೆ ಮುಗಿದ ನಂತರ ಸಾಯಂಕಾಲ ಸೋಂಕು ನಿವಾರಕ ದ್ರಾವಣಗಳಿಂದ ಸ್ವಚ್ಛಗೊಳಿಸುವುದು [ಕೆಮಿಕಲ್ ಡಿಸ್–ಇನ್‌ಫೆಕ್ಷನ್ (Chemical Disinfection) ಮಾಡುವುದು.]


**H) ವಿಶೇಷ ಸೂಚನೆ:**

1) ಆಯೋಗದಿಂದ ನಡೆಸಲಾಗುವ ಪರೀಕ್ಷೆಗೆ ಸಂಬಂಧಿಸಿದಂತೆ, ಜಿಲ್ಲಾಧಿಕಾರಿಗಳು ಸಮನ್ವಯ ಮೇಲ್ವಿಚಾರಕರಾಗಿರುತ್ತಾರೆ(Co-Ordinating Supervisor).
2) ಆಯೋಗದಿಂದ ನಡೆಸಲಾಗುವ ಪರೀಕ್ಷೆಯಲ್ಲಿ ಕಾರ್ಯ ನಿರ್ವಹಿಸುವ ಎಲ್ಲಾ ಸಿಬ್ಬಂದಿಗಳು, ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಮೇಲುಸ್ತುವಾರಿಯಲ್ಲಿ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸುವುದು.
3) ಪರೀಕ್ಷಾ ಪ್ರಕ್ರಿಯೆಯಲ್ಲಿ ಭಾಗವಹಿಸುವ/ಕಾರ್ಯನಿರ್ವಹಿಸುವ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ, ಈ ಬಗ್ಗೆ ಸ್ಪಷ್ಟ ನಿರ್ದೇಶನಗಳನ್ನು ಆಯಾ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಜಿಲ್ಲಾ ಆರೋಗ್ಯಾಧಿಕಾರಿಗಳು ಕಡ್ಡಾಯವಾಗಿ ತರಬೇತಿ ನೀಡಿ ಪರೀಕ್ಷೆಯನ್ನು ಯಶಸ್ವಿಗೊಳಿಸಲು ಕೋರಿದೆ.
4) ನಿಯಂತ್ರಣ ವಲಯಗಳಿಂದ ಬರುವ ನೇರ/ಪ್ರಾಥಮಿಕ/ಹೆಚ್ಚಿನ ಅಪಾಯದ ಸಂಪರ್ಕಹೊಂದಿರುವ ಅಭ್ಯರ್ಥಿಗಳಿಗೆ ಪ್ರತ್ಯೇಕ ಕೋಣೆಯಲ್ಲಿ ಪರೀಕ್ಷೆಯನ್ನು ಬರೆಯಲು ಅವಕಾಶವಿರುತ್ತದೆ.
5) ಕೋವಿಡ್ ದೃಢಪಟ್ಟಿರುವ ಅಭ್ಯರ್ಥಿ/ಗಳಗೆ (ಕೋವಿಡ್ ಸಕ್ರಿಯ ಪ್ರಕರಣಗಳು) ಪ್ರತ್ಯೇಕ ಪರೀಕ್ಷಾ ಕೇಂದ್ರದಲ್ಲಿ ವ್ಯವಸ್ಥೆ ಮಾಡಬೇಕು. ಜಿಲ್ಲೆಯ ಆರೋಗ್ಯ ಪ್ರಾಧಿಕಾರದ/ಬಿಬಿಎಂಪಿ ಅಂತಹ ಕೇಂದ್ರಗಳಲ್ಲಿ ಅನುಸರಿಸಬೇಕಾದ ಅವಶ್ಯ ಮುನ್ನೆಚ್ಚರಿಕೆಗಳನ್ನು ಕೈಗೊಳ್ಳುವಲ್ಲಿ ಸಮನ್ವಯ ಸಾಧಿಸಬೇಕು. ಮಾರ್ಗಸೂಚಿಯನ್ನು (ಅನುಬಂಧ–02) ರಲ್ಲಿ ನೀಡಲಾಗಿದೆ.
6) ಪರೀಕ್ಷೆ ಮುಗಿದ ನಂತರ, ಎಲ್ಲಾ ಕೊಠಡಿಗಳು, ಕುರ್ಚಿಗಳು, ಟೇಬಲ್ ಸೇರಿದಂತೆ ಇತ್ಯಾದಿಗಳನ್ನು ಸಾಮಾನ್ಯವಾಗಿ ಬಳಸುವ ಡಿಟರ್ಜೆಂಟ್ ಅಥವಾ 1% ಸೋಡಿಯಂ ಹೈಪೋಕ್ಲೋರೈಟ್ ದ್ರಾವಣದಿಂದ (ಅನುಬಂಧ–03) ಸೋಂಕುರಹಿತಗೊಳಿಸಬೇಕು.
7) ನಿಯಂತ್ರಣ ವಲಯಗಳಿಂದ ಬರುವ ನೇರ/ಪ್ರಾಥಮಿಕ/ಹೆಚ್ಚಿನ ಅಪಾಯದ ಸಂಪರ್ಕಗಳು, ರೋಗಲಕ್ಷಣಗಳಿರುವ ಮತ್ತು ಕೋವಿಡ್ ದೃಢಪಟ್ಟ ಅಭ್ಯರ್ಥಿಗಳು ಬರೆದಿರುವ ಪರೀಕ್ಷಾ ಕೊಠಡಿಯನ್ನು 1% ಸೋಡಿಯಂ ಹೈಪೋಕ್ಲೋರೈಟ್ ದ್ರಾವಣದೊಂದಿಗೆ 30 ನಿಮಿಷಗಳ ಸಂಪರ್ಕ ಅವಧಿಯೊಂದಿಗೆ ಸೋಂಕುರಹಿತಗೊಳಿಸಬೇಕು. ತದನಂತರ ಕೊಠಡಿಯನ್ನು ಸ್ವಚ್ಛಗೊಳಿಸಬೇಕು ಮತ್ತು 24 ಗಂಟೆಗಳ ನಂತರ ಉಪಯೋಗಿಸಬೇಕು.
8) ಹೊರರಾಜ್ಯ/ಹೊರ ದೇಶದಿಂದ ಆಗಮಿಸಿ ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ಹಾಗೂ ಅವರ ಸಹಾಯಕರಿಗೆ ಸೂಕ್ತ ಮುನ್ನೆಚ್ಚರಿಕೆ ವಹಿಸಿ, ಪರೀಕ್ಷೆ ತೆಗೆದುಕೊಳ್ಳಲು ಅನುಮತಿಸುವುದು ಹಾಗೂ ಅಂತಹ ಅಭ್ಯರ್ಥಿಗಳನ್ನು ಕ್ವಾರಂಟೈನ್‌ಗೆ ಒಳಪಡಿಸುವುದರಿಂದ ವಿನಾಯಿತಿ ನೀಡಲಾಗಿದೆ ಹಾಗೂ ಅಂತಹ ಅಭ್ಯರ್ಥಿಗಳಿಗೆ ವಿಶೇಷ ಕೊಠಡಿಯನ್ನು ವ್ಯವಸ್ಥೆ ಮಾಡಿ ಪರೀಕ್ಷೆ ಬರೆಯಿಸಲು ಕ್ರಮ ವಹಿಸುವುದು.

13.8.20

ಆಯುಕ್ತರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

Annexure 1: Hand hygiene




Page 5 of 7

## Annexure-2

## Guidelines for conducting examinations for COVID positive candidates

In view of ongoing COVID-19 pandemic, no candidate who is COVID positive shall be denied an opportunity to appear in the online examinations (computer based). The following guidelines shall be implemented in coordination with the local health authorities i.e. District health officer/District surveillance officer, Chief health officer-BBMP.

A medical team with 108 ambulances (ALS) shall be stationed at the center of examination.

**Centre of examination:**

- There shall be a separate examination center/room for COVID positive candidate/s as per availability.
- The room shall have natural ventilation.
- Hand sanitizer shall be made available at entry point and appropriate places.
- Disposable glasses for drinking water shall be made available.
- Strict physical distancing of 2 metres (6 feet) is to be maintained at all times. Seating arrangement shall be such that at least 3 feet distance is maintained between the candidates.
- Liquid soap for hand washing shall be provided in the toilet.
- After the examination, the room shall be disinfected thoroughly with 1% sodium hypochlorite solution with a contact period of 30 minutes. Subsequently the room shall be cleaned and can be used after 24 hours.
- General solid waste can be disposed as any general waste. Waste generated (used mask, goggles, cap, gown, etc.) shall be disposed in a separate cover preferably yellow and hand it over to common biomedical waste treatment facility (CBWTF).

**Candidate:**

- Candidate shall inform regarding COVID-19 status to the Commission through email id: Kpsc.covid@gmail.com well in advance [The cut-off dates to inform the COVID-19 status regarding different examinations conducted by KPSC are hosted in KPSC website "https://kpsc.kar.nic.in"] to make necessary special arrangements.
- Even if the candidate informs the Commission regarding the COVID-19 status beyond the cut-off date, the Commission will consider such request and inform the respective Deputy Commissioners to make necessary special arrangements including transport, food, ambulance facilities etc., to enable such COVID-19 candidates to attend the examination in the separate examination center allotted for COVID positive candidates.
- Candidate shall produce medical certificate from their treating physician certifying that they are fit to write the examinations.
- The candidate shall provide "risk consent" for taking up the examination.
- Candidate shall wear N-95 face mask & Hand gloves compulsorily at all times.
- Candidate shall use hand sanitizer whenever required.

**Examiner/Invigilators/Expert assistant/Support staff/Room superintendent:**

- He/she shall wear N-95 masks, hand gloves, etc.
- Strict physical distancing of 2 metres (6 feet) is to be maintained at all times.
- Designated table for keeping the attendance/invigilator dairy for candidates to affix signature.
- Designated table shall be earmarked for keeping the attendance/invigilator dairy for candidates to affix signature.
- Admission tickets shall be signed by the invigilator maintaining physical distancing and using sanitizer
- Avoid frequent conversation with the student.

## Annexure 3: Guidelines for Preparation and use* of 1% sodium hypochlorite solution

| Product | Available chlorine | 1percent |
|---|---|---|
| Sodium hypochlorite – liquid bleach | 3.5% | 1 part bleach to 2.5 parts water |
| Sodium hypochlorite – liquid | 5% | 1 part bleach to 4 parts water |
| NaDCC (sodium dichloro-isocyanurate) powder | 60% | 17 grams to 1 litre water |
| NaDCC (1.5 g/ tablet) – tablets | 60% | 11 tablets to 1 litre water |
| Chloramine – powder | 25% | 80 g to 1 litre water |
| Bleaching powder | 70% | 70g to 1 litre water |
| Lysol for disinfection<br>Lysol IP (50% Cresol and 50% Liquid soap) | - | 2.5% Lysol (1 litre of Lysol in 19 litres of water) |
| Use*- All touch surfaces like tables, door handles, telephone, table bell, switches, lift buttons, Computer systems, Key boards shall be wiped with clean cloth dipped in 7% Lysol or 1 % sodium hypochlorite solution and air dried for 1 hour before exams | | |

***************